# ಸವಾಲಿನತ್ತ ಕರೀನಾ ಚಿತ್ತ



ಬಿಟೌನ್‌ನ ನಂಬರ್ ಒನ್ ನಟಿ ಎಂಬ ಕಿರೀಟ ಕಳಚಿಕೊಂಡ ಬಳಿಕ ಕರೀನಾ ಕಪೂರ್ ಹೆಚ್ಚು ಸುದ್ದಿಯಾಗುತ್ತಿಲ್ಲ. ತಣ್ಣಗೆ ಸಿನಿಮಾಗಳನ್ನು ಮಾಡಿಕೊಂಡು, ಸಂಸಾರ ನೋಡಿಕೊಳ್ಳುವ ಹೊಣೆಗಳ ನಡುವೆ ಆಕೆ ಬಿಜಿ. ಅದರ ನಡುವೆ ಬದಲಾಗುತ್ತಿರುವ ಬಾಲಿವುಡ್ ಸಿನಿಮಾ ಶೈಲಿಯಲ್ಲಿ ಸವಾಲಿನ ಪಾತ್ರಗಳನ್ನು ಮಾಡುವ ಬಯಕೆ ವ್ಯಕ್ತಪಡಿಸಿದ್ದಾಳೆ.

ವಿವಾದಿತ 'ಉಡ್ತಾ ಪಂಜಾಬ್' ಚಿತ್ರದಲ್ಲಿ ವಿಶೇಷ ಪಾತ್ರದಲ್ಲಿ ಡಾಕ್ಟರ್ ಆಗಿ ಕರೀನಾ ಕಾಣಿಸಿಕೊಂಡಿದ್ದಳು. ಇದು ಚಿಕ್ಕ ಪಾತ್ರವಾದರೂ ಅದರ ತೀವ್ರತೆ ದೊಡ್ಡದು. ಡ್ರಗ್ ಕುರಿತು ಪ್ರಬಲವಾದ ಸಂದೇಶ ನೀಡುವಂಥದ್ದು. ಈ ರೀತಿಯ ಹೆಚ್ಚು ಪ್ರಸ್ತುತವೆನಿಸುವ ವಸ್ತುಗಳ ಸಿನಿಮಾ ಮಾಡಲು ಜನಪ್ರಿಯ ನಟರು ಮುಂದಾಗುತ್ತಿಲ್ಲ ಎಂದು ಕರೀನಾ ಬೇಸರ ವ್ಯಕ್ತಪಡಿಸಿದ್ದಾಳೆ. ಈ ಜನಪ್ರಿಯ ಕಲಾವಿದರ ಪಟ್ಟಿಯಲ್ಲಿ ಆಕೆ ತನ್ನನ್ನೂ ಸೇರಿಸಿಕೊಂಡಿದ್ದಾಳೆ. ಚಿತ್ರದಲ್ಲಿ ಒಂದೆರಡು ಸನ್ನಿವೇಶಗಳಲ್ಲಿ ಬಂದು ಹೋಗುವ ಪಾತ್ರಗಳೆಂದಾಗ ತಾರೆಯರು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಮುಖ್ಯವಾಹಿನಿಯ ಕಲಾವಿದರು ಕಮರ್ಷಿಯಲ್ ಸಿನಿಮಾಗಳ ಭಾಗವಾಗುವುದನ್ನೇ ಸದಾ ಬಯಸುತ್ತಾರೆ. ನಾನೂ ಅಂತಹ ಅನೇಕ ಸಿನಿಮಾಗಳನ್ನು ಮಾಡಿದ್ದೇನೆ ಎಂದಿದ್ದಾಳೆ ಕರೀನಾ.

'ಉಡ್ತಾ ಪಂಜಾಬ್'ನ ಕಥೆ ತೀಕ್ಷ್ಣವಾದುದು. ಈ ಕಾರಣಕ್ಕಾಗಿಯೇ ಚಿಕ್ಕ ಪಾತ್ರವಾದರೂ ಮಾಡಲು ಒಪ್ಪಿಕೊಂಡಿದ್ದು. ಮುಖ್ಯವಾಗಿ ಕಥೆ ಓದಿದಾಗಲೇ ಚಿತ್ರದ ಭಾಗವಾಗಬೇಕು ಎಂದೆನಿಸಿತ್ತು. ಒಂದು ಶಕ್ತಿಯುತ ಮತ್ತು ಉತ್ತಮ ಸಂದೇಶ ನೀಡುವ ಪಾತ್ರವಿದ್ದಾಗ ಅದನ್ನು ನಿರ್ವಹಿಸುವುದು ಅಪರೂಪದ ಅವಕಾಶ ಎನ್ನುವುದು ಆಕೆಯ ಅಭಿಪ್ರಾಯ. ಒಮ್ಮೆ ಚಿತ್ರದ ಪತ್ರಿಕಾಗೋಷ್ಠಿಗೆ ಕರೀನಾ ಗೈರಾಗಿದ್ದು ಸುದ್ದಿಯಾಗಿತ್ತು. ಶಾಹಿದ್ ಜತೆ ವೇದಿಕೆಯಲ್ಲಿ ಕಾಣಿಸಿಕೊಳ್ಳಲು ಆಕೆಗೆ ಇಷ್ಟವಿಲ್ಲ, ಚಿಕ್ಕ ಪಾತ್ರವಾಗಿರುವುದರಿಂದ ನಿರ್ಲಕ್ಷಿಸುತ್ತಿದ್ದಾಳೆ ಎಂದೆಲ್ಲಾ ಮಾತುಗಳು ಕೇಳಿಬಂದಿದ್ದವು. ಆದರೆ ಇವೆಲ್ಲಾ ಸುಳ್ಳು. ಟ್ರೇಲರ್ ಲಾಂಚ್‌ನಲ್ಲಿ ನಾನು ಭಾಗವಹಿಸಿದ್ದೆ. ಸಿನಿಮಾ ಬಗ್ಗೆ ಹೆಚ್ಚೂ ಕಡಿಮೆ ದಿನವೂ ಮಾಧ್ಯಮಗಳಲ್ಲಿ ಮಾತನಾಡುತ್ತಿದ್ದೇನೆ. ಅದು ನನ್ನ ವೃತ್ತಿಯ ಭಾಗ ಎಂಬುದರ ಅರಿವಿದೆ ಮತ್ತು ನನಗೆ ಅದು ಇಷ್ಟದ ಕೆಲಸ ಕೂಡ. ಆದರೆ ಸದಾ ಚಿತ್ರತಂಡದೊಂದಿಗೆ ಕಾಣಿಸಿಕೊಳ್ಳದೆ ಇರುವುದು ಅದರಿಂದ ದೂರವಿದ್ದೇನೆ ಎಂದರ್ಥವಲ್ಲ ಎಂದು ಸ್ಪಷ್ಟನೆ ನೀಡಿದ್ದಾಳೆ ಆಕೆ.



# ಲೆಕ್ಕಕ್ಕಿಲ್ಲದ ನಟಿ

ಹಾರರ್ ಚಿತ್ರಗಳನ್ನು ಮಾಡುವುದರಲ್ಲಿ ವಿಕ್ರಂ ಭಟ್ ಎತ್ತಿದ ಕೈ. ಭಟ್ ಕುಟುಂಬದ ಚಿತ್ರಗಳೆಂದರೆ ಹಾರರ್, ಥ್ರಿಲ್ಲರ್, ಕ್ರೈಂ ಮತ್ತು ಸೆಕ್ಸ್ ಅಂಶಗಳಲ್ಲಿ ಒಂದಾದರೂ ಇರಲೇ ಬೇಕು. 1920 ಸರಣಿಯ ಚಿತ್ರಗಳ ಮೂಲಕ ಪ್ರೇಕ್ಷಕರನ್ನು ಬೆಚ್ಚಿ ಬೀಳಿಸಿದ್ದ ವಿಕ್ರಂ, ಈಗ ಒಂದು ವರ್ಷ ಕ್ರಮಿಸಿದ್ದಾರೆ. ಅಂದರೆ ಅವರು ಮುಂದಿನ ಚಿತ್ರ '1921'. ಶೀರ್ಷಿಕೆಯೇ ಸುಳಿವು ನೀಡುವಂತೆ ಇದು ಕೂಡ ಹಾರರ್ ಚಿತ್ರ. ಜರೀನ್ ಖಾನ್ ಈ ಚಿತ್ರದ ನಾಯಕಿ. ನಾಯಕನ ಪಾತ್ರಕ್ಕೆ ಹುಡುಕಾಟ ನಡೆಯುತ್ತಿದೆ.

ನಾಯಕಿಯ ಪಾತ್ರಕ್ಕೆ ಜರೀನ್ ಹೊರತುಪಡಿಸಿ ಬೇರೆ ಹೆಸರನ್ನು ಆಯ್ಕೆ ಮಾಡುವ ಗೋಜಿಗೇ ಹೋಗಲಿಲ್ಲ ಎನ್ನುತ್ತಾರೆ ವಿಕ್ರಂ. 'ಹೇಟ್ ಸ್ಟೋರಿ 3' ಚಿತ್ರದಲ್ಲಿ ಆಕೆಯ ಅಭಿನಯಕ್ಕೆ ಮರುಳಾಗಿದ್ದಾಗಿ ವಿಕ್ರಂ ಹೇಳಿಕೊಂಡಿದ್ದಾರೆ. ವಿಕ್ರಂ ಪ್ರಕಾರ ಜರೀನ್, ಬಾಲಿವುಡ್‌ನಲ್ಲಿ ಅತಿ ಕಡೆಗಣಿಸಲಾಗಿರುವ ನಟಿ. '1920' ಸರಣಿ ಸಿನಿಮಾ ಒಂದು ಕಾಲಾವಧಿಯ ಹಿನ್ನೆಲೆ ಹೊಂದಿರುವಂಥದ್ದು. ಅಲ್ಲದೆ ಇವು ನಾಯಕಿ ಪ್ರಧಾನ ಚಿತ್ರಗಳು. ಇಲ್ಲಿನ ನಟಿಯರಿಗೆ ಒಂದು ನಿರ್ದಿಷ್ಟ ಆಕಾರದ ಶರೀರದ ಅಗತ್ಯವಿದೆ. ಅವರ ದೇಹಾಕೃತಿ, ದೇಹಭಾಷೆ ಯಾವ ಕಾಲಮಾನಕ್ಕೂ ಹೊಂದಿಕೊಳ್ಳುವಂತೆ ಇರಬೇಕು. ಜರೀನ್ ಅದಕ್ಕೆ ಹೇಳಿ ಮಾಡಿಸಿರುವಂತಹ ನಟಿ. ಆಕೆಯೇ ಈ ಪಾತ್ರಕ್ಕೆ ಸೂಕ್ತಳು ಎಂದಿದ್ದಾರೆ ವಿಕ್ರಂ. '1920', '1920 ಇವಿಲ್ ರಿಟರ್ನ್ಸ್', '1920 ಲಂಡನ್' ಚಿತ್ರಗಳಂತೆಯೇ ಈ ಚಿತ್ರವೂ ಹಾರರ್ ಪ್ರಿಯರಿಗೆ ಇಷ್ಟವಾಗಲಿದೆ ಎನ್ನುವುದು ವಿಕ್ರಂ ಭಟ್ ನಂಬಿಕೆ.

ಅತ್ತ ದೊಡ್ಡ ಗೆಲುವಿಗಾಗಿ ಕಾದಿರುವ ಜರೀನ್ ಕೂಡ ದೆವ್ವದ ಮುಖಾಮುಖಿಗಾಗಿ ಕಾದಿದ್ದಾಳೆ. 'ವೀರ್', 'ರೆಡಿ', 'ಹೌಸ್‌ಫುಲ್2' ಮುಂತಾದ ತಾರಾ ಕಲಾವಿದರ ಜತೆ ನಟಿಸಿದ ಚಿತ್ರಗಳು ಹೆಸರು ಮಾಡಿದರೂ ಅದರ ಲಾಭ ಜರೀನ್‌ಗೆ ಗಿಟ್ಟಿಲ್ಲ. ತಮಿಳು, ಪಂಜಾಬಿ ಚಿತ್ರರಂಗಗಳಲ್ಲಿ ಒಂದು ಕೈ ನೋಡಿದರೂ ಅದೃಷ್ಟ ಖುಲಾಯಿಸಿಲ್ಲ. ವಿಕ್ರಂ ಭಟ್ ಪ್ರಕಾರ ಜರೀನ್ ಅತ್ಯುತ್ತಮ ನಟಿಯರ ಸಾಲಿನಲ್ಲಿ ಸೇರುವ ಅರ್ಹತೆಯುಳ್ಳವಳು. ಆಕೆಯ ಅಭಿನಯ ಅಷ್ಟು ತೀಕ್ಷ್ಣವಾಗಿದೆ. ಆದರೆ ಆಕೆಯ ಪ್ರತಿಭೆಯನ್ನು ಗುರುತಿಸುವ ಕೆಲಸ ನಡೆಯುತ್ತಿಲ್ಲ. ವಿಕ್ರಂ ಗರಡಿಯೊಳಗೆ ಸೇರಿಕೊಂಡ ಬಳಿಕ ತನ್ನ ಗ್ರಹಗತಿ ಬದಲಾಗಬಹುದು ಎಂಬ ಭರವಸೆ ಜರೀನ್‌ಳದ್ದು.